ಕರ್ನಾಟಕ ಸರ್ಕಾರ

ಸಂಖ್ಯೆ: ಆಪಸಂ : ಸಿಬ್ಬಂದಿ- ಎ5 :ಇ-14 : 2022

ಆಯುಕ್ತರ ಕಾರ್ಯಾಲಯ
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು ದಿನಾಂಕ: 11-07-2022

# ಪ್ರಕಟಣೆ

## ಕನ್ನಡ ಭಾಷೆಯನ್ನು SSLC ಅಥವಾ ಉನ್ನತ ಪರೀಕ್ಷೆಗಳಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡದವರಿಗೆ ಕನ್ನಡ ಭಾಷೆ ಪರೀಕ್ಷೆಗೆ ಹಾಜರಾಗುವ ಬಗ್ಗೆ

ವಿಷಯ: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ 400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕನ್ನಡ ಭಾಷಾ ಪರೀಕ್ಷೆ ನಡೆಸುವ ಕುರಿತು.

ಉಲ್ಲೇಖ: ಪ್ರಕಟಣೆ ಸಂಖ್ಯೆ: ಆಪಸಂ : ಸಿಬ್ಬಂದಿ-ಎ5: ಇ-14 : 2022 ದಿ: 15-06-2022

*****

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿನ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧ, ಕನ್ನಡ ಭಾಷೆಯನ್ನು SSLC ಅಥವಾ ಉನ್ನತ ಪರೀಕ್ಷೆಗಳಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಪ್ರಸ್ತುತ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಈ ಸಂಸ್ಥೆಯು ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧ ಕನ್ನಡ ಭಾಷಾ ಪರೀಕ್ಷೆಯನ್ನು ದಿನಾಂಕ: **07-08-2022**ರಂದು ನಡೆಸಲು ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆದಕಾರಣ ಈಗಾಗಲೇ ಪ್ರಕಟಿಸಲಾದ ಪಟ್ಟಿಯನ್ನು ಒಳಗೊಂಡಂತೆ ಹಾಗೂ ಪ್ರಕಟಣೆ ಪಟ್ಟಿಯಲ್ಲಿ ನಮೂದಿಸದ, SSLC ಅಥವಾ ಉನ್ನತ ಪರೀಕ್ಷೆಗಳಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡದಿರುವ ಅಭ್ಯರ್ಥಿಗಳು ಸಹಾ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ **(EXCEL SHEET)** ಮಾಹಿತಿಯನ್ನು ದಿನಾಂಕ :**14-07-2022**ರೊಳಗೆ ಈ ಕಚೇರಿಯ ಮಿಂಚಂಚೆ ವಿಳಾಸ commissionerahvs@gmail.com ಗೆ ಸಲ್ಲಿಸಲು ಸೂಚಿಸಲಾಗಿದೆ ಹಾಗೂ ಒಂದು ವೇಳೆ ನಿಗಧಿತ ಅವಧಿಯಲ್ಲಿ ಮಾಹಿತಿ ನೀಡದೆ ನೇರ ನೇಮಕಾತಿ ಆಯ್ಕೆಗೆ ತಪ್ಪಿ ಹೋದಲ್ಲಿ, ಇದಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

11/7

ಜಂಟಿ ನಿರ್ದೇಶಕರು(ಆಡಳಿತ)
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳು,
ಇಲಾಖಾ ಆಯ್ಕೆ ಸಮಿತಿ, ಬೆಂಗಳೂರು

Karnataka Examinations Authority

AHVS Recruitment 2022

## Kannada Language Exam For the post of Veterinary Officers

| Sl. No. | Particulars | Details |
|---|---|---|
| 1 | Name of Candidate | |
| 2 | Name of Father | |
| 3 | Name of Mother | |
| 4 | Date of Birth | |
| 5 | Option for District Name for Examination Place | |
| 6 | Photo JPG | Scan and upload |
| 7 | Signature JPG | Scan and upload |